ರಾಜ್ಯದಲ್ಲಿ ನಕಲಿ ಸಾರಾಯಿ ಹಾವಳಿ ತಪ್ಪಿಸುವುದು

289 (658) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾರಾಯಿ ನಿಷೇಧವಾಗಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಪುಟ್ಟ ಅಂಗಡಿಗಳಲ್ಲಿ ನಕಲಿ ಸಾರಾಯಿ ಪ್ಯಾಕೆಟ್‌ಗಳನ್ನು ಮಾರಾಟ ಮಾಡುತ್ತಿರುವುದು ಹಾಗೂ ಕಳ್ಳಭಟ್ಟಿ ದಂಧೆ ನಿರಂತರವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ ಒಂದು ವರ್ಷದಿಂದ ಇಲ್ಲಿಯವರೆವಿಗೆ ಎಷ್ಟು ಕಡೆ ಅಬಕಾರಿ ಇಲಾಖೆಯು ದಾಳಿ ನಡೆಸಿದೆ ಹಾಗೂ ಈ ಸಂಬಂಧವಾಗಿ ಎಷ್ಟು ಮೊಕದ್ದಮೆಗಳನ್ನು ಹೂಡಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಇ) ಹಾಗಿದ್ದಲ್ಲಿ, ಈ ಹಾವಳಿಯನ್ನು ಸಮರ್ಪಕವಾಗಿ ತಡೆಗಟ್ಟಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಬಂದಿದೆ.

ಆ) ಅಬಕಾರಿ ಇಲಾಖೆಯು ರಾಜ್ಯಾದ್ಯಾಂತ ನಕಲಿ ಸಾರಾಯಿ ಮತ್ತು ಕಳ್ಳಭಟ್ಟಿಗೆ ಸಂಬಂಧಿಸಿದಂತೆ ಜುಲೈ–2008 ರಿಂದ ಜೂನ್–2009 ರವರೆಗೆ 44,740 ದಾಳಿಗಳನ್ನು ನಡೆಸಿ, 3706 ಮೊಕದ್ದಮೆಗಳನ್ನು ದಾಖಲಿಸಿರುತ್ತದೆ ಹಾಗೂ ಜುಲೈ–2009 ರಿಂದ ಜನವರಿ–2010 ರವರೆಗೆ 31,117 ದಾಳಿಗಳನ್ನು ನಡೆಸಿ 2033 ಮೊಕದ್ದಮೆಗಳನ್ನು ದಾಖಲಿಸಿರುತ್ತದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧದಲ್ಲಿ ಒದಗಿಸಿದೆ).

ಇ) ಕಳ್ಳಭಟ್ಟಿ, ನಕಲಿ ಮದ್ಯ/ ಸಾರಾಯಿಯ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜನರಿಗೆ ತಿಳುವಳಿಕೆ ನೀಡಲು ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ. ಗ್ರಾಮ ಪಂಚಾಯಿತಿ ಸದಸ್ಯರು, ಕಂದಾಯ ಅಧಿಕಾರಿಗಳು, ಯುವಕ ಸಂಘ, ಸ್ತ್ರೀ ಶಕ್ತಿ ಸಂಘಗಳು ಇವುಗಳನ್ನೊಳಗೊಂಡಂತೆ ಅಬಕಾರಿ ಅಕ್ರಮಗಳ ಬಗ್ಗೆ ಮಾಹಿತಿ ನೀಡಲು ತಿಳುವಳಿಕೆ ಪತ್ರಗಳನ್ನು ನೀಡಲಾಗಿದೆ. ಹಳೆಯ ಆರೋಪಿಗಳ ಚಲನವಲನಗಳ ಮೇಲೆ ನಿಗಾ ಇರಿಸಲಾಗಿದೆ. ಹಾಗೂ ರಾಜ್ಯಾದ್ಯಂತ 1890 ಮಾರ್ಗಗಳನ್ನು ರಚಿಸಿ 14363 ಪಾಯಿಂಟ್ ಪುಸ್ತಕಗಳನ್ನು ನಿರ್ವಹಿಸಿ ಕಳ್ಳಭಟ್ಟಿ ಕೇಂದ್ರಗಳ/ನಕಲಿ ಮದ್ಯ ತಯಾರಿಕಾ

ಕೇಂದ್ರಗಳ ಮೇಲೆ ನಿರಂತರ ದಾಳಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಸನ್ನದು ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳ ಮೇಲೆ ನಿಗಾ ಇರಿಸಲಾಗಿದೆ.

ಅನುಬಂಧ –1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2008–09		2009–10	
		ನಡೆಸಿದ ದಾಳಿಗಳು	ದಾಖಲಿಸಿದ ಮೊಕದ್ದಮೆಗಳು	ನಡೆಸಿದ ದಾಳಿಗಳು	ದಾಖಲಿಸಿದ ಮೊಕದ್ದಮೆಗಳು
1	ಬೆಂಗಳೂರು ನಗರ	1252	55	1409	24
2	ಬೆಂಗಳೂರು ಗ್ರಾ.	1239	2	1061	3
3	ಬಾಗಲಕೋಟೆ	1861	379	1572	173
4	ಬೆಳಗಾಂ	2796	25	2130	5
5	ಬಳ್ಳಾರಿ	2350	60	1442	36
6	ಬೀದರ್	1414	368	596	57
7	ಬಿಜಾಪುರ	2161	134	762	85
8	ಚಾಮರಾಜನಗರ	11	11	6	6
9	ಚಿಕ್ಕಮಗಳೂರು	1839	199	1747	199
10	ಚಿಕ್ಕಬಳ್ಳಾಪುರ	550	136	362	95
11	ಚಿತ್ರದುರ್ಗ	663	73	357	28
12	ದಕ್ಷಿಣ ಕನ್ನಡ	2112	70	2376	34
13	ದಾವಣಗೆರೆ	2743	99	1882	39
14	ಧಾರವಾಡ	1818	94	1238	86
15	ಗದಗ	1215	62	798	80
16	ಗುಲ್ಬರ್ಗ	1866	362	1347	133
17	ಹಾಸನ	3768	90	2611	94
18	ಹಾವೇರಿ	1530	65	1318	35
19	ಕೊಡಗು	688	35	933	48
20	ಕೋಲಾರ	1439	340	1293	106
21	ಕೊಪ್ಪಳ	3	23	3	25
22	ಮಂಡ್ಯ	3615	100	1952	28
23	ಮೈಸೂರು	2516	502	614	293
24	ರಾಯಚೂರು	2578	140	1012	51
25	ರಾಮನಗರ	235	2	162	14
26	ಶಿವಮೊಗ್ಗ	1559	205	959	108
27	ತುಮಕೂರು	2174	287	1746	190

28	ಉಡುಪಿ	426	7	315	1
29	ಉತ್ತರ ಕನ್ನಡ	–	–	–	–
30	ಯಾದಗಿರಿ	862	85	346	10
ಒಟ್ಟು		44740	3706	31117	2033

ಬೀದರ್ ಜಿಲ್ಲೆಯಲ್ಲಿ ಹೊಸ ಪಶು ಚಿಕಿತ್ಸಾಲಯ ಪ್ರಾರಂಭಿಸುವ ಬಗ್ಗೆ

290 (659) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಜಾನುವಾರು ಗಣತಿ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಅವುಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರಗಳ ವಿವರ ಒದಗಿಸುವುದು)

ಆ) ಹಾಗಿದ್ದಲ್ಲಿ, ಎಷ್ಟು ಜಾನುವಾರುಗಳ ಸಂಖ್ಯೆಗೆ ಒಂದು ಪಶು ಚಿಕಿತ್ಸಾಲಯ/ ಪಶು ಆಸ್ಪತ್ರೆಗಳು ಅವಶ್ಯಕತೆಯಿದೆ?

ಇ) ಬೀದರ್ ಜಿಲ್ಲೆಯ ವಿವಿಧ ವಿಧಾನ ಸಭಾ ಕ್ಷೇರದಲ್ಲಿ ಹಾಲಿ ಇರುವ ಪಶುಚಿಕಿತಾಲಯ / ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಈ) ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಪಶು ಚಿಕಿತ್ಸಾಲಯ / ಆಸ್ಪತ್ರೆಗಳು ಅಗತ್ಯವಿದೆ?

ಉ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಪಶು ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಮಾಡಲಾಗಿದೆ. ಜಾನುವಾರುಗಳ ಸಂಖ್ಯೆ: 1,64.370. ವಿಧಾನ ಸಭಾ ಕ್ಷೇತ್ರಗಳ ವಿವರಗಳನ್ನು ಅನುಬಂಧ–1 ರಲ್ಲಿ ನೋಡುವುದು.

ಆ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನನ್ವಯ ಪ್ರತಿ 5000 ಜಾನುವಾರು ಘಟಕಕ್ಕೆ ಪಶುವೈದ್ಯರನ್ನೊಳಗೊಂಡ ಒಂದು ಪಶುವೈದ್ಯಕೀಯ ಸಂಸ್ಥೆಯ ಅವಶ್ಯಕತೆ ಇರುತ್ತದೆ.